ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 21-23
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಎಲ್.ಹನುಮಂತಯ್ಯ ಅವರ 'ಅಂಬೇಡ್ಕರ್' ನಾಟಕ: ಒಂದು ಅಧ್ಯಯನ

**ಲಕ್ಷ್ಮೀಬಾಯಿ ಅಂಬಾದಾಸ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

**Abstract:**
*ಎಲ್. ಹನುಮಂತಯ್ಯರವರು ಕನ್ನಡ ಪ್ರಮುಖ ಸಾಹಿತಿಗಳಲ್ಲಿ ಒಬ್ಬರು. ಸೃಜನಶೀಲ ಸಾಹಿತಿಯಾದ ಇವರು 'ಕಪ್ಪು ಕಣ್ಣಿನ ಹುಡುಗಿ', 'ಅವ್ವ (ಕವಿತಾ ಸಂಕಲನ); 'ಅಂಬೇಡ್ಕರ್ ಕವನಗಳು' (ಸಂಪಾದನೆ) 'ದಲಿತ ಲೋಕದ ಒಳಗೆ' (ವಿಮರ್ಶೆ), ಅಂಬೇಡ್ಕರ್' (ನಾಟಕ) ಪ್ರಕಟಿತ ಕೃತಿಗಳು. ಶ್ರೀಯುತರು ಜನಪರ ಸಂಘಟನೆಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿ ಸಾಮಾಜಿಕ ಸಮಾನತೆಗಾಗಿ ಹೋರಾಡುತ್ತಿದ್ದಾರೆ. ಪ್ರಸ್ತುತ ಲೇಖನದಲ್ಲಿ ಎಲ್ ಹನುಮಂತಯ್ಯರವರ 'ಅಂಬೇಡ್ಕರ್' ನಾಟಕ ಕುರಿತು ವಿಮರ್ಶಿಸಲಾಗಿದೆ.*

**Keywords:** *ಅಂಬೇಡ್ಕರ್, ನಾಟಕ ಸಾಹಿತ್ಯ, ಹನುಮಂತಯ್ಯ ಎಲ್, ದಲಿತ ರಂಗಭೂಮಿ.*

**ಪೀಠಿಕೆ**

ಕನ್ನಡದಲ್ಲಿ ನಾಟಕ ಸಾಹಿತ್ಯ ದೃಶ್ಯ ಮತ್ತು ಶ್ರವ್ಯದ ಮೂಲಕ ಪ್ರಸಿದ್ಧಿಯಾಗಿದೆ. ನಾಟಕದಲ್ಲಿ ರಂಗ ಪ್ರಪಂಚದ ಹಲವಾರು ಘಟನೆಗಳನ್ನು ಒಂದೇ ವಸ್ತು ಪ್ರಯೋಗದಲ್ಲಿ ಅವಳವಡಿಸಿಕೊಂಡು ಬರೆಯಲಾಗು ತ್ತಿದೆ. ಕನ್ನಡದ ರಂಗಭೂಮಿಯಲ್ಲಿ ದಲಿತ ರಂಗಭೂಮಿಗೆ ಒಂದು ಪರಂಪರೆಯಿದೆ. ಕನ್ನಡ ನಾಟಕಗಳಲ್ಲಿ ಡಾ. ಬಾಬಾ ಸಾಹೇಬ ಅಂಬೇಡ್ಕರ್ ಕುರಿತ ಸಮಗ್ರವಾದ ಚಿಂತನೆಗಳು ಬರುತ್ತಲಿವೆ. ಅವರದೇ ಆದ ಸಂಪುಟಗಳು ಬೇರೆ ಬೇರೆ ಭಾಷೆಗೆ ಅನುವಾದ ಗೊಂಡಿವೆ. ಡಾ. ಬಿ. ಆರ್.ಅಂಬೇಡ್ಕರ್ ಕುರಿತು ಹಲವಾರು ಸಾಹಿತ್ಯ ಪ್ರಕಾರದಲ್ಲಿ ಕೃತಿಗಳು ಬಂದಿವೆ. ಬರುತ್ತಲಿವೆ ಹಾಗೇ ನಾಟಕಗಳನ್ನು ರಚನೆಗೆ ಅನೇಕರು ತೊಡಗಿಸಿಕೊಂಡಿದ್ದಾರೆ. ಅವರಲ್ಲಿ ಡಾ. ಎಲ್. ಹನುಮಂತಯ್ಯನವರು ಕೂಡಾ ಒಬ್ಬರು.

ದೇವರಾಯ ಇಂಗಳೆ, ಸಿದ್ರಾಮ ಕಾರಣಿಕ, ವಿ. ಮುನಿವೆಂಕಟಪ್ಪ. ಟಿ.ಎಂ.ಭಾಸ್ಕರರಂತಹ ಅನೇಕರು ಡಾ. ಅಂಬೇಡ್ಕರ್ ಕುರಿತು ನಾಟಕ ಬರೆದಂತೆ ಡಾ. ಎಲ್. ಹನುಮಂತಯ್ಯನವರು ಸಹ ಅಂಬೇಡ್ಕರ್ ಕುರಿತು ನಾಟಕ ರಚಿಸಿದ್ದಾರೆ. ಪ್ರಖ್ಯಾತ ನಿರ್ದೇಶಕರಾದ ಸಿಜಿಕೆ ಅವರ ಸಲಹೆ ಪಡೆದು ಬರೆದಿದ್ದಾರೆ. ಒಂದು ಅಂಕ ಹದಿನಾಲ್ಕು ದೃಶ್ಯಗಳಿಂದ ಕೂಡಿದ ಏಪ್ಪತ್ತು ನಾಲ್ಕು ಪುಟಗಳಲ್ಲಿ ಈ ನಾಟಕ ರಚನೆಗೊಂಡಿದೆ. ಇಪ್ಪತ್ತು ಪಾತ್ರಗಳು ಪ್ರಮುಖವಾಗಿ ಬರುತ್ತವೆ. ಅಂಬೇಡ್ಕರ ಜೀವನ ಚರಿತ್ರೆಯನ್ನು ಎಲ್ಲರೂ ಓದಿದ್ದಾರೆ. ಇಲ್ಲಿ ಅವರ ಜೀವನ ಸಾಧನೆಯ ಮೇಲೆ ಕಡಿಮೆ ಅವಧಿಯಲ್ಲಿ ಪರಿಣಾಮ ಬೀರಿ ವರ್ತಮಾನಕ್ಕೆ ಹೇಗೆ ಮುಖಾಮುಖಿಯಾಗಿ ನಿಲ್ಲುತ್ತಾರೆಂಬ ಸಂಗತಿ ಗಮನಿಸಬೇಕಾಗಿದೆ. ಎಲ್. ಹನುಮಂತಯ್ಯನವರು ಅಂಬೇಡ್ಕರ ಕುರಿತು ಅಪಾರ ಅಧ್ಯಯನ ಜ್ಞಾನದಿಂದ ಇಲ್ಲಿ ಅವರನ್ನು ತುಂಬಾ ಆಪ್ತವಾಗಿ ಚಿತ್ರಿಸುತ್ತಾರೆ. ಇದನ್ನೇ ಅವರು ಹೇಳಿಕೊಂಡಂತೆ ಅನೇಕ ವರ್ಷಗಳಿಂದ ನಾನು ಓದಿದ

***Please cite this article as:*** ಲಕ್ಷ್ಮೀಬಾಯಿ ಅಂಬಾದಾಸ. (2023). ಎಲ್.ಹನುಮಂತಯ್ಯ ಅವರ 'ಅಂಬೇಡ್ಕರ್' ನಾಟಕ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್.* 2(2), 21–23.

ಅಂಬೇಡ್ಕರ್ ಹಾಗೂ ಸಿಜಿಕೆ ಕೇಳಿದ ಅಂಬೇಡ್ಕರ ಬೇರೆಯಾಗಿ ಇದ್ದರು. ಬರೆಯಲು ಕೂತಾಗಲೇ ನಾನು ನಾಟಕಕ್ಕಾಗಿ ಬೇಕಾದ ಸ್ವಂತ ಅಂಬೇಡ್ಕರ್‌ರನ್ನು ಹುಡುಕಲು ಪ್ರಾರಂಭಿಸಿದ್ದು. ಅವರು ನನಗೆ ಎಷ್ಟು ದಕ್ಕಿದರೋ ಗೊತ್ತಿಲ್ಲ. ನಿರ್ದೇಶಕರ ಮನಸ್ಸಿನೊಳಗೆ ಆಗಲೇ ಹೊಕ್ಕು ಕೂತಿದ್ದರು. ನನ್ನನ್ನೂ ಕೆಣಕುತ್ತಿದ್ದರು'[1] ಎಂದು ಹೇಳಿದ್ದಾರೆ.

ಅಂಬೇಡ್ಕರ್ ಮಲಗಿದ ದೃಶ್ಯದ ಮೂಲಕ ನಾಟಕ ಪ್ರಾರಂಭವಾಗುತ್ತದೆ. ಬುದ್ಧವಾಣಿ ಮೊಳಗುತ್ತದೆ. ರತ್ತೂ, ಸವಿತಾ, ಟಾಮಿ ಮಾತನಾಡಿಸುತ್ತಾ, ನನ್ನ ಜನರಿಗೆ ನಾನು ಏನು ಮಾಡಿದೆ ಎಂಬ ಅವರ ಧ್ವನಿ ಇಲ್ಲಿ ಧ್ವನಿಪೂರ್ಣವಾಗಿ ಚಿತ್ರಿಸಿದ್ದಾರೆ. ಡಾ.ಅಂಬೇಡ್ಕರ್ ಅವರ ಜೀವನ ಮತ್ತು ಹೋರಾಟಗಳನ್ನು ಕುರಿತ ನಾಟಕ ಇದಾಗಿದೆ. ನಮ್ಮ ದೇಶದ ಸ್ವಾತಂತ್ರ್ಯ ಪೂರ್ವ ಮತ್ತು ಆ ನಂತರದ ಕಾಲಘಟ್ಟದಲ್ಲಿ ನಡೆದು ಹೋದ ಘಟನೆ ಇಲ್ಲಿ ನಾಟಕಕ್ಕೆ ತರುವುದು ತುಂಬಾ ಕಷ್ಟ, ಸಾಮಾಜಿಕ ಸಂಘರ್ಷದ ಅನೇಕ ತುಣುಕುಗಳು ಇಲ್ಲಿ ಹೃದಯ ವಿಹಂಗಮವಾಗಿ ಹೊರಬಂದಿದೆ. ಅದಕ್ಕೆ ಇಲ್ಲಿ ಪೂನಾ ಒಪ್ಪಂದದ ಚಿಂತನೆ ಇಲ್ಲಿ ಪ್ರಮುಖವಾಗಿದೆ. ಈ ಲಿಂಕ್‌ನ್ನು ಕೊಡುವ ಮೂಲಕ ನಾಟಕಕ್ಕೆ ಹೃದಯ ಸ್ಪರ್ಶತೆ ಕೊಡುತ್ತಾರೆ. ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಚಿಂತನೆಗಳ ಮುಖಾಮುಖಿ ಇಲ್ಲಿ ಜರಗುತ್ತವೆ. ಈ ನಾಟಕದ ಮುಖ್ಯ ವಸ್ತುವೆಂದರೂ ತಪ್ಪಲ್ಲ. ಭಾರತೀಯ ಸಮಾಜವನ್ನು ಅದರ ಜಾತಿಮೂಲದ ಮನೋಭಾವನೆಯನ್ನು ಅರ್ಥೈಸಿಕೊಳ್ಳಲು ಈ ನಾಟಕ ಬೇಸರ ತರಿಸದೇ ಚಿಂತನೆಗೆ ಹಚ್ಚುವುದು ಇದರ ವೈಶಿಷ್ಟ್ಯವೆಂದು'[2] ಡಾ. ದತ್ತಾತ್ರೇಯ ಇಕ್ಕಳಕಿ ಅವರು ಹೇಳುತ್ತಾರೆ.

ಮಹಾಡ್ ಕೆರೆಯ ನೀರನ್ನು ಮುಟ್ಟಲು ಕಾರ್ಯಕರ್ತರು ಶಿವತಾರಕರ್ ಅಜ್ಜ ಹುಡುಗ, ಎಲ್ಲರೂ ಸೇರಿಕೊಂಡು ನೀರು ಮುಟ್ಟುತ್ತಾರೆ. ಅಜ್ಜ ತನಗೆ ಮುಟ್ಟುಲು ಹಿಂದೆ ಹೋದ ಹುಡುಗ ತಾನು ಮುಟ್ಟಿ ಸಂತಸ ಪಟ್ಟ. ಗಾಂಧೀಜಿ ಬೇಟಿಯಾಗಲು ಮುಂಬಯಿ ಮಿನಿಭವನ ಮಲಬಾರ ಬೆಟ್ಟಕ್ಕೆ ತೆರಳಿ ಕಾಂಗ್ರೆಸ್ ಪಕ್ಷ ಸೇರುವುದು ಸ್ವಾತಂತ್ರ್ಯಕ್ಕಿಂತ ನನ್ನ ಜನರು ಮುಖ್ಯವೆಂಬ ಚರ್ಚೆ ನಡೆದಾಗ ನನಗೆ ತಾಯ್ನಾಡು ಎನ್ನುವುದೇ ಇಲ್ಲ ಈ ಧರ್ಮವನ್ನು ನನ್ನ ಧರ್ಮವೆಂದು ಹೇಗೆ ತಿಳಿಯಲಿ ನನ್ನ ಜನರನ್ನು ನಾಯಿ ಬೆಕ್ಕುಗಳಿಗಿಂತ ಕೀಳಾಗಿ ಕಂಡಿದ್ದಾರೆ. ಕುಡಿವ ನೀರು ಮತ್ತು ಸಹಜ ಬದುಕಿಗೆ ಹೋರಾಡುವ ಸ್ಥಿತಿ ನನ್ನದಾಗಿದೆ. ನನ್ನ ಜನರ ಹಕ್ಕು ರಕ್ಷಣೆಗಾಗಿ ಮಾಡಿದ ಕೆಲಸಗಳಿಗಾಗಿ ನನ್ನನ್ನು ದ್ರೋಹಿ ಎಂದು ಕರೆದರು ಚಿಂತೆಯಿಲ್ಲ.

ಶತಮಾಗಳ ದೌರ್ಜನ್ಯವನ್ನು ತಡೆಯಲು ಮಾಡುತ್ತಿರುವ ನನ್ನ ಹೋರಾಟ ಪಾಪವಾದರೂ ಸರಿ, ನನ್ನ ಜನರ ಹಕ್ಕುಗಳ ರಕ್ಷಣೆಯನ್ನು ದೇಶಕ್ಕೆ ಯಾವುದೇ ತೊಂದರೆಯಾಗದಂತೆ ಮುಂದುವರೆಸು ತ್ತೇನೆ ಖಂಡಿತ ಮುಂದುವರೆಸುತ್ತೇನೆ[3] ಎಂದು ನೇರವಾಗಿ ಗಾಂಧೀಜಿಗೆ ಹೇಳುತ್ತಾರೆ. ಅಸ್ಪೃಶ್ಯರನ್ನು ಹಿಂದೂಗಳಿಂದ ರಾಜಕೀಯವಾಗಿ ಬೇರ್ಪಡಿ ಸುವುದನ್ನು ಗಾಂಧೀಜಿ ವಿರೋಧಿಸುತ್ತಾರೆ. ಪೆರಿಯಾರರೊಂದಿಗೆ ಭೇಟಿ ಮಾಡಿ ನಾವು ಜಾತಿ ವಾದಕ್ಕೆ ವಾರ್ ಮಾಡಿದರೆ ಪೆರಿಯಾರ್ ಅವರು ರಾಮಕೃಷ್ಣರ ಮೇಲೆ ವಾರ್ ಮಾಡುತ್ತಾರೆಂದರು. ಅವರ ಸಂಭಾಷಣೆಗಳು ಇಲ್ಲಿವೆ. ಕಾರ್ಮಿಕರ ಮುಷ್ಕರ ಹೋರಾಟದಲ್ಲಿ ಅಸ್ಪ್ರಶ್ಯ ಕಾರ್ಮಿಕರ ಚಿಂತಾಜನಕದ ಬಗ್ಗೆ ತುಂಬಾ ಕ್ರೋಧಗೊಂಡ ಅಂಬೇಡ್ಕರ ಅವರು ಮಾಕ್ಸವಾದವು ಕೂಡ ಜಾತಿಯಿಂದ ಮುಕ್ತವಾಗಿಲ್ಲವೆಂದು ಟೀಕಿಸುತ್ತಾರೆ. ಮನುಸ್ಮೃತಿ ಬೆಂಕಿ ಹಚ್ಚುವ ಮೂಲಕ ತನ್ನ ಜನರನ್ನು ಹೀನಾಯವಾಗಿ ನಡೆಸಿಕೊಂಡಿದೆ ಎಂದು ಗ್ರಂಥ ಸುಡಲು ಮುಂದಾಗುತ್ತಾರೆ.

ನರೇಂದ್ರನಾಥ ಭಗವಾನ, ಪರಮಾನಂದರು ಸೇರಿಸಿಕೊಂಡು ಸಮ್ಮೇಳನವನ್ನು ಮಾಡಬೇಕೆಂದಾಗ ನರೇಂದ್ರನಾಥ ವಿರೋಧಿಸುತ್ತಾರೆ. ಎರಡನೇ ದುಂಡುಮೇಜಿನ ಪರಿಷತ್ತಿನಲ್ಲಿ ಕಮ್ಯುನರ್ ಅವಾರ್ಡನ ಪ್ರಶ್ನೆಯನ್ನು ವಿರೋಧಿಸುತ್ತಾರೆ. ಬ್ರಿಟಿಷರು ಅಸ್ಪೃಶ್ಯರಿಗೆ

ಮೀಸಲಾತಿ ನೀಡಬೇಕು ಎಂದಾಗ ಒಪ್ಪಿದರು– ಗಾಂಧೀಜಿ ಇದನ್ನು ವಿರೋಧಿಸಿದ್ದರು. ಇದುವರೆಗೂ ಅವರು ಕೈಗೊಂಡ ಸತ್ಯಾಗ್ರಹಗಳು ದೇಶ ಸ್ವಾತಂತ್ರ್ಯದ ಬಗ್ಗೆ ಇದ್ದರೆ ದಲಿತ–ಅಸ್ಪೃಶ್ಯರ ವಿರುದ್ಧ ವಾದ ಕೊನೆಯ ಸತ್ಯಾಗ್ರಹವಾಗಿದೆ. ನೆಹರು , ಗಾಂಧಿ ಮಾಳವೀಯ, ದೇವದಾಸ ಚರ್ಚೆ ಮಾಡಿ ಇವರೆಲ್ಲರೂ ದೇಶ ಸ್ವಾತಂತ್ರ್ಯ ಮುಖ್ಯ ಈಗ ದಲಿತ ಮೀಸಲಾತಿ ಏಕೆ ಆಮೇಲೆ ಬಗೆಹರಿಸಿಕೊಂಡರಾಯಿತು ಎಂದು ಚರ್ಚಿಸುತ್ತಾರೆ.

ಮಾಳವೀಯ ಅವರು ಒಂದು ಕಡೆ ಗಾಂಧಿ ಹಠ ಮತ್ತೊಂದೆಡೆ ನಿಮ್ಮ ಸ್ವಾಭಿಮಾನವಾಗಿದೆ. ನೀವು ಏನೇ ಹೇಳಿ ಗಾಂಧಿ ಉಪವಾಸದಿಂದ ಜಗತ್ತೇ ತತ್ತರಿಸಿದೆ. ದೇಶ ಬೀಳುವ ಸ್ಥಿತಿಯಲ್ಲಿದೆ ನೀವು ಕೂಡಲೇ ಗಾಂಧೀಜಿಗೆ ಭೇಟಿಯಾಗು ಎಂದು ಹೇಳುತ್ತಾರೆ. ಗಾಂಧೀಜಿಯನ್ನು ಹೇಗೆ ದ್ವೇಷಿಸುತ್ತೀರಿ ನಾನು ಕೂಡ ನಿಮ್ಮನ್ನು ದ್ವೇಷಿಸುತ್ತೇನೆಂದು ರಮಾಬಾಯಿ ನುಡಿಯುತ್ತಾರೆ. ನಿಮಗೆ ಏನಾದರೂ ಆದರೆ ನಮ್ಮ ಗತಿಯೇನು ಎಂದು ಪ್ರಶ್ನಿಸುತ್ತಾರೆ.

ಎರವಾಡ ಜೈಲಿದಲ್ಲಿ ಗಾಂಧೀಜಿ ಉಪವಾಸ ಸತ್ಯಾಗ್ರಹ ಕೈಗೊಂಡು ಅವರ ಆರೋಗ್ಯ ತುಂಬಾ ಗಂಭೀರವಾಗಿರುತ್ತದೆ. ಅಂತಹ ಹೊತ್ತಿನಲ್ಲಿ ದೇವದಾಸ್ ರವರು ಅಂಬೇಡ್ಕರ್ ಅವರಲ್ಲಿ ಭಿನ್ನವಿಸಿಕೊಳ್ಳುತ್ತಾರೆ. ನೀವು ಹೇಗೋ ಮುಖ್ಯರೋ ನಮಗೆ ಗಾಂಧಿ ಕಸ್ತೂರಬಾ ಕೂಡಾ ಮುಖ್ಯ ಅವರ ಪ್ರಾಣ ಉಳಿಸಿರಿ ಎಂದು ಹೇಳುವರು ಹತ್ತು ವರ್ಷಕ್ಕೆ ಮೀಸಲಾತಿ ಇರಬೇಕು ಗಾಂಧಿ ಒಪ್ಪಿದರೆ ಪ್ರತ್ಯೇಕ ಮತದಾನಕ್ಕೂ ಒಪ್ಪಲ್ಲಿಲ್ಲ ಕೊನೆಗೆ ಡಾ. ಅಂಬೇಡ್ಕರ್ ಹೀಗೆ ಹೇಳುತ್ತಾರ ದೇವದಾಸ್ ಶಿವತಾರಕರ್ '*It is the black day. It is the black day of my life. It is the black of day of my life'*[4] ಎಂದು ಗದ್ಗದಿಸುವ ಧ್ವನಿ ಕಾಣುತ್ತದೆ.

'ಹಿಂದೂ ಕೋಡ್ ಬಿಲ್' ಬಗ್ಗೆ ನೆಹರು ಕುರಿತು ಚರ್ಚಿಸುತ್ತಾರೆ. ಕೊನೆಗೂ ಹಿಂದೂ ಕೋಡ್ ಬಿಲ್ ಮಸೂದೆ ಸಂಸತ್‌ನಲ್ಲಿ ಬಿದ್ದು ಹೋಗುತ್ತದೆ. ಹೀಗಾಗಿ ಅಂಬೇಡ್ಕರ್ ತಕ್ಷಣ ರಾಜೀನಾಮೆ ಕಳಿಸಿದರು. ಈ ದೇಶದಲ್ಲಿ ಮಹಿಳೆಯರು ಮತ್ತು ಅಸ್ಪೃಶ್ಯರ ಸ್ಥಿತಿ ಒಂದೇಯಾಗಿದೆ ಎಂದು ಹೇಳಿದರು. ಇದು ದುರಾದೃಷ್ಟವಶಾತ್ ಎಂದು ನೊಂದುಕೊಳ್ಳುವರು. 'ಹಿಂದೂವಾಗಿ ಹುಟ್ಟಿದ್ದೇನೆ ಆದರೆ ಹಿಂದೂವಾಗಿ ಸಾಯಲಾರೆ' ಎಂದು ಬೌದ್ಧ ಧಮ್ಮಕ್ಕೆ ಮರಳುತ್ತಾರೆ.

ಡಾ.ಎಲ್.ಹನುಮಂತಯ್ಯನವರು ಈ ನಾಟಕದಲ್ಲಿ ಅಂಬೇಡ್ಕರ್ರವರ ಮಹಾಡ್ ಕೆರೆ ಹೋರಾಟ, ಕಾಳಾರಾಮ ಮಂದಿರ, ಪೂನಾ ಒಪ್ಪಂದ, ಹಿಂದೂ ಕೋಡ್ ಬಿಲ್, ಬೌದ್ಧ ಧಮ್ಮ ಸ್ವೀಕಾರ ಇಂತಹ ಪ್ರಮುಖ ಘಟನೆಗಳು ಇಟ್ಟುಕೊಂಡು ಮನ ಮಿಡಿಯುವಂತೆ ನಾಟಕ ರಚಿಸಿದ್ದಾರೆ. ಪಾತ್ರ, ಭಾಷೆ, ವಸ್ತು, ಶೈಲಿ, ತಂತ್ರಗಳಿಂದ ಓದುವ ಸಾಹಿತ್ಯ ಕೃತಿಯಾಗಿ ನಾಟಕ ಪರಿಣಾಮ ಬೀರುವುದು. ಈ ನಾಟಕವು ಕೇವಲ ಪ್ರಯೋಗಿಕವಾಗಿ ಮಾತ್ರವಲ್ಲದೆ ಸಶಕ್ತವಾಗಿ ಮೂಡಿ ಬಂದಿದೆ. ಈ ದೃಷ್ಟಿಯಿಂದ ಎಲ್.ಹನುಮಂತಯ್ಯನವರು ಅಂಬೇಡ್ಕರ ನಾಟಕ ಎಲ್ಲ ಕಾಲಕ್ಕೂ ಎಲ್ಲರಿಗೂ ಪ್ರಸ್ತುತವಾಗುತ್ತದೆ.

**ಕೊನೆಟಿಪ್ಪಣಿಗಳು**

1. ಹನುಮಂತಯ್ಯ ಎಲ್. (2014). *ಅಂಬೇಡ್ಕರ್* (ನಾಟಕ). ಸುಮೇಧ ಪ್ರಕಾಶನ. ಪು.3
2. ಅದೇ., ಕೃತಿಯ ಬೆನ್ನುಡಿ
3. ಅದೇ., ಪು.13,14
4. ಅದೇ., ಪು.59

**ಪರಾಮರ್ಶನ ಗ್ರಂಥಗಳು**


- ಹನುಮಂತಯ್ಯ ಎಲ್. (2018). *ಡಾ. ಎಲ್. ಹನುಮಂತಯ್ಯ ಸಮಗ್ರ ಸಾಹಿತ್ಯ ಸಂಪುಟ–1 ಕಾವ್ಯ –ನಾಟಕ – ಮಹಾಪ್ರಬಂಧ.* ಕನ್ನಡ ಪುಸ್ತಕ ಪ್ರಾಧಿಕಾರ.
- ಪೋತೆ.ಎಚ್.ಟಿ. (2019). *ಡಾ.ಬಿ.ಆರ್. ಅಂಬೇಡ್ಕರ್ ಪುಸ್ತಕ ಪ್ರೀತಿ.* ಕುಟುಂಬ ಪ್ರಕಾಶನ ಹೌಸ್.